ಕರ್ನಾಟಕ ಸರಕಾರ ಕಂದಾಯ ಇಲಾಖೆ
**ಸಹಾಯಕ ಆಯುಕ್ತರ ಕಾರ್ಯಾಲಯ, ಮಂಗಳೂರು ಉಪವಿಭಾಗ**
ಮಿನಿ ವಿಧಾನಸೌಧ ಕಟ್ಟಡ,ಎರಡನೇ ಮಹಡಿ,ಮಂಗಳೂರು-575001
ದೂರವಾಣಿ/ಫ್ಯಾಕ್ಸ್:ಕಛೇರಿ: 0824-2220569, ಇ-ಮೇಲ್: ac.mlore@gmail.com

ಎಡಿಸ್..ಎಲ್.ಎನ್.ಡಿ./ಪಿ.ಡಿ.ಆರ್.94./2016-17 ದಿನಾಂಕ:-07.05.2016

*ಸಹಾಯಕ ಆಯುಕ್ತರು,ಮಂಗಳೂರು ಉಪವಿಭಾಗ,ಮಂಗಳೂರು ಇವರ ನಡವಳಿಗಳು*

ವಿಷಯ: ದಕ್ಷಿಣ ಕನ್ನಡ ಜಿಲ್ಲೆ -ಮಂಗಳೂರು ತಾಲ್ಲೂಕು. ಬಡಗ ಎಕ್ಕಾರು ಗ್ರಾಮದ ಸ.ನಂ.28/ 1 ರಲ್ಲಿ 10.00 ಎಕ್ರೆ ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆ ತರಬೇತಿ ಕೇಂದ್ರಕ್ಕೆ ಕಾದಿರಿಸುವ ಕುರಿತು-ಆದೇಶ.

ಉಲ್ಲೇಖ: 1.ಮಾನ್ಯ ಜಿಲ್ಲಾಧಿಕಾರಿಯವರ ಆದೇಶ ಸಂಖ್ಯೆ.ಸಿಡಿಸ್.ಎಲ್.ಎನ್.ಡಿ. (1) ಪಿ.ಡಿ.ಆರ್.75/13-14 (ಬಿ2) ದಿನಾಂಕ.18.04.2016

2. ಈ ಕಚೇರಿ ಪತ್ರ ಸಮ ಸಂಖ್ಯೆ :ಎಲ್.ಎನ್.ಡಿ.ಪಿಡಿಆರ್.52/2015-16 ದಿನಾಂಕ.24.04.2015

3.ತಹಶೀಲ್ದಾರರು ಮಂಗಳೂರು ಇವರ ಪ್ರಸ್ತಾವನೆ.ಸಂ ಎಲ್.ಎನ್.ಡಿ.ಪಿಡಿಆರ್.45/2014-15 ದಿನಾಂಕ.26.11.2015

************

ಪ್ರಸ್ತಾವನೆ:

ದಕ್ಷಿಣ ಕನ್ನಡ ಜಿಲ್ಲೆ -ಮಂಗಳೂರು ತಾಲ್ಲೂಕು. ಬಡಗ ಎಕ್ಕಾರು ಗ್ರಾಮದ ಸ.ನಂ.28/ 1 ರಲ್ಲಿ 10.00 ಎಕ್ರೆ ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆ ತರಬೇತಿ ಕೇಂದ್ರಕ್ಕೆ ಕಾದಿರಿಸುವ ಕುರಿತು-ತಹಶೀಲ್ದಾರರು ಮಂಗಳೂರು ಇವರು ಉಲ್ಲೇಖ(3) ರಂತೆ ಪ್ರಸ್ತಾವನೆ ಸಲ್ಲಿಸಿ. ಪ್ರಸ್ತಾವಿತ ಜಮೀನು ಗೋಮಾಳ, ರಸ್ತೆ, ಅರಣ್ಯ..ಪೊರಂಬೋಕು ಜಮೀನಾಗಿರುವುದಿಲ್ಲ.ಸಂಬಂಧಪಟ್ಟ ಗ್ರಾಮ ಪಂಚಾಯತ್ ನಿಂದ ಅಭಿಪ್ರಾಯ ಪಡೆಯಲಾಗಿರುತ್ತದೆ. ಹಾಗೂ ಸೂಚಿತ ಜಮೀನು ಪಂಚಾಯತ್ ವ್ಯಾಪ್ತಿಯಲ್ಲಿರುತ್ತದೆ.ಪ್ರಸ್ತಾವಿತ ಜಮೀನು ಗ್ರಾಮ ಪಂಚಾಯತ್ ರಸ್ತೆಯ ಪಕ್ಕದಲ್ಲಿರುತ್ತದೆ. ಸದ್ರಿ ಜಮೀನನ್ನು ಸೂಚಿತ ಉದ್ದೇಶಕ್ಕೆ ಕಾದಿರಿಸುವ ಕುರಿತು ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದ್ದು,ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. ಹಾಗೂ ಸದ್ರಿ ಜಮೀನಿನ ಕುರಿತು ನಮೂನೆ 50-53, 94 ಸಿ ಅರ್ಜಿಗಳು ತನಿಖೆಗೆ ಬಾಕಿ ಇರುವುದಿಲ್ಲ. ಎಂದು ವರದಿ ಸಲ್ಲಿಸಿರುತ್ತಾರೆ. ಸದ್ರಿ ಜಮೀನಿನ ವಾಸ್ತವಾಂಶವನ್ನು ತಹಶೀಲ್ದಾರರು ಸ್ಥಳ ತನಿಖೆ ನಡೆಸಿ ದಿನಾಂಕ.16.03.2015 ರಂದು ತನಿಖಾ ಟಿಪ್ಪಣಿ ಸಲ್ಲಿಸಿ, ಸದ್ರಿ ಜಮೀನಿನ ಕುಮ್ಕಿ ಹಕ್ಕನ್ನು ವಿರಹಿತಪಡಿಸಿ ಸೂಚಿತ ಉದ್ದೇಶಕ್ಕೆ ಕಾದಿರಿಸುವ ಕುರಿತು ಶಿಫಾರಸ್ಸು ಮಾಡಿರುತ್ತಾರೆ. ಆದರೆ ಸದ್ರಿ ಜಮೀನು ಕುಮ್ಕಿ ಜಮೀನಾಗಿರುವುದರಿಂದ ಕುಮ್ಕಿ ಹಕ್ಕನ್ನು ವಿರಹಿತ ಪಡಿಸಿ ಆದೇಶ ಹೊರಡಿಸುವಂತೆ ಉಲ್ಲೇಖ(2) ರಂತೆ ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರಲಾಗಿತ್ತು.

ಅದರಂತೆ ಮಾನ್ಯ ಜಿಲ್ಲಾಧಿಕಾರಿಯವರು ದಕ್ಷಿಣ ಕನ್ನಡ ಜಿಲ್ಲೆ,ಮಂಗಳೂರು ಇವರು ಉಲ್ಲೇಖ(1) ರಂತೆ ಸದ್ರಿ ಜಮೀನಿನ ಕುಮ್ಕಿ ಹಕ್ಕನ್ನು ವಿರಹಿತಪಡಿಸಿ ಆದೇಶ ಹೊರಡಿಸಿರುತ್ತಾರೆ.ಹಾಗೂ ಸದ್ರಿ ಜಮೀನನ್ನು ಸೂಚಿತ ಉದ್ದೇಶಕ್ಕಾಗಿ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 71 ರನ್ವಯ ಕಾದಿರಿಸಿ ಆದೇಶ ಹೊರಡಿಸುವಂತೆ ಸೂಚಿಸಿರುತ್ತಾರೆ.



Scanned with CamScanner

ಆದ್ದರಿಂದ ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ, ದಕ್ಷಿಣ ಕನ್ನಡ ಜಿಲ್ಲೆ -ಮಂಗಳೂರು ತಾಲ್ಲೂಕು, ಬಡಗ ಎಕ್ಕಾರು ಗ್ರಾಮದ ಸ.ನಂ.28/ 1 ರಲ್ಲಿ 1.00 ಎಕ್ರೆ ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆ ತರಬೇತಿ ಕೇಂದ್ರಕ್ಕೆ ಕಾದಿರಿಸುವ ಕುರಿತು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆದೇಶಿಸಿದೆ.

## -: ಆದೇಶ:-

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆ -ಮಂಗಳೂರು ತಾಲ್ಲೂಕು, ಬಡಗ ಎಕ್ಕಾರು ಗ್ರಾಮದ ಸ.ನಂ.28/ 1 ರಲ್ಲಿ 10.00 ಎಕ್ರೆ ಜಮೀನನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆ ತರಬೇತಿ ಕೇಂದ್ರಕ್ಕೆ ಕರ್ನಾಟಕ ಭೂ ಕಂದಾಯ ಕಾಯಿದೆ 1964 ಕಲಂ 71 ರನ್ವಯ ಕಾಯ್ದಿರಿಸಿ ಆದೇಶಿಸಿದೆ.

ಷರತ್ತುಗಳು.

- ಕಾದಿರಿಸಲಾದ ಜಮೀನನ್ನು ಮೇಲೆ ಹೇಳಲಾದ ಉದ್ದೇಶಕ್ಕೆ ಮಾತ್ರವೇ ಉಪಯೋಗಿಸಬೇಕಲ್ಲದೆ ಬೇರೆ ಉದ್ದೇಶಕ್ಕೆ ಉಪಯೋಗಿಸಬಾರದು.
- ಕಾದಿರಿಸಿದ ಜಮೀನನ್ನು ಯಾವುದೇ ಕಾರಣಕ್ಕೂ ಪರಭಾರೆ ಮಾಡಬಾರದು.
- ಕಾದಿರಿಸಿದ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಲು ಅವಕಾಶ ಇರುವುದಿಲ್ಲ.
- ಕಾದಿರಿಸಿದ ಜಮೀನಿನಲ್ಲಿ ಯಾವುದೇ ಕಾರಣಕ್ಕೂ ಅತಿಕ್ರಮಣಕ್ಕೆ ಎಡೆಮಾಡಿಕೊಡಬಾರದು.
- ಕಾದಿರಿಸಿದ ಜಮೀನಿನಲ್ಲಿ ಗಿಡ, ಮರ ಮಟ್ಟುಗಳಿದ್ದಲ್ಲಿ ಅವುಗಳನ್ನು ಅರಣ್ಯ ಇಲಾಖೆಯ ಮುಖಾಂತರ ವಿಲೇಗೊಳಿಸತಕ್ಕದ್ದು.
- ಕಾದಿರಿಸಿದ ಜಮೀನಿನಲ್ಲಿ ಈ ಮೇಲೆ ಸೂಚಿಸಲಾದ ಉದ್ದೇಶಕ್ಕೆ ಈ ಆದೇಶವಾದ 2 ವರ್ಷದೊಳಗೆ ಬಳಸತಕ್ಕದ್ದು.
- ಕಾಲ ಕಾಲಕ್ಕೆ ಹೊರಡಿಸುವ ನ್ಯಾಯಾಲಯ ತಿರ್ಮಾನ/ಆದೇಶಕ್ಕೆ ಬದ್ಧರಾಗಿರಬೇಕು.

ಈ ಮೇಲೆ ವಿವರಿಸಿದ ಯಾವುದೇ ಒಂದು ಷರತ್ತನ್ನು ಉಲ್ಲಂಘಿಸಿರುವುದು ಕಂಡು ಬಂದಲ್ಲಿ ತಕ್ಷಣ ಈ ಆದೇಶವನ್ನು ರದ್ದುಪಡಿಸಿ, ಸದ್ರಿ ಜಮೀನಿನಲ್ಲಿ ಇರಬಹುದಾದ ಕೃತಗಳ ಸಹಿತ ಯಾವುದೇ ಪರಿಹಾರ ನೀಡದೆ ಸರಕಾರದ ಸ್ವಾಧೀನ ಪಡೆಯಲಾಗುವುದು. ಸದ್ರಿ ಜಮೀನನ್ನು ಮಂಗಳೂರು ತಹಶೀಲ್ದಾರರು ತಕ್ಷಣ ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸುವುದು ಹಾಗೂ ಈ ಆದೇಶದಂತೆ ಗಣಕೀಕೃತ ಪಹಣಿಯಲ್ಲಿ ಕಡ್ಡಾಯವಾಗಿ ನಮೂದಿಸುವಂತೆ ನಿರ್ದೇಶಿಸಿದೆ.

(ಡಾ.ಡಿ.ಆರ್.ಅಶೋಕ್)
ಸಹಾಯಕ ಆಯುಕ್ತರು
ಮಂಗಳೂರು ಉಪವಿಭಾಗ, ಮಂಗಳೂರು

ಇವರಿಗೆ,

1.ಮಾನ್ಯ ಜಿಲ್ಲಾಧಿಕಾರಿಯವರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ದಯಾಪರ ಅವಗಾಹನೆಗೆ ಸಲ್ಲಿಸಿದೆ.

2.ತಹಶೀಲ್ದಾರರು ಮಂಗಳೂರು ಇವರಿಗೆ -ಸಂಪೂರ್ಣ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ.

3.ಗ್ರಾಮಲೆಕ್ಕಿಗರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಡಗ ಎಕ್ಕಾರು .ಗ್ರಾಮ- ಇವರಿಗೆ ಸೂಕ್ತ ಕ್ರಮಕ್ಕಾಗಿ.

4.ಮುಖ್ಯ ಅಗ್ನಿ ಶಾಮಕ ಅಧಿಕಾರಿ.ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ,ಮಂಗಳೂರು ಇವರಿಗೆ -ತಹಶೀಲ್ದಾರ್,ಮಂಗಳೂರು ಇವರ ಮುಖಾಂತರ.



Scanned with CamScanner